ಅಸಲು ದಾವೆ ಸಂಖ್ಯೆ - 118/2010
ಡಿ.ಡಬ್ಲ್ಯೂ - 01
ದಿನಾಂಕಃ 16-11-2024
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಎಂ.ಎಸ್.ಬಿ ವಕೀಲರಿಂದ**

ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ಜನನವಾದಾಗ ಜನನ ಪ್ರಮಾಣ ಪತ್ರದಲ್ಲಿ, ಜನನ ದಿನಾಂಕ, ಒಂದು ವೇಳೆ ಹೆಸರು ಇಟ್ಟಿದ್ದರೆ ಜನನವಾದ ವ್ಯಕ್ತಿಯ ಹೆಸರು, ತಂದೆ ತಾಯಿಯ ಹೆಸರು, ಎಲ್ಲಿ ಜನನವಾದ ಸ್ಥಳ ಮತ್ತು ಮರಣವಾದಾಗ ಮರಣ ಪ್ರಮಾಣ ಪತ್ರದಲ್ಲಿ ಮರಣದ ದಿನಾಂಕ, ತಂದೆ ತಾಯಿಯ ಸಂಪೂರ್ಣ ವಿವರ ಮತ್ತು ಮರಣವಾದ ಸ್ಥಳದ ಬಗ್ಗೆ ಮಾಹಿತಿ ಇರುತ್ತದೆ ಎಂದರೆ ಸರಿ. ಮುಂದುವರೆದು ಮರಣ ಪ್ರಮಾಣ ಪತ್ರದಲ್ಲಿ ತಂದೆ ತಾಯಿಯರ ಹೆಸರು ಮಾತ್ರ ಇರುತ್ತದೆ. ಹಾಗೆಯೇ ಶಾಲಾ ಪ್ರಮಾಣ ಪತ್ರದಲ್ಲಿ ಶಾಲೆಗೆ ಸೇರಿದ ವ್ಯಕ್ತಿಯ ಜನನ ದಿನಾಂಕ, ತಂದೆ ತಾಯಿಯರ ಹೆಸರು, ಎಲ್ಲಿಯ ತನಕ ಓದಿದ ತರಗತಿಯ ವಿವರ ಇರುತ್ತದೆ ಎಂದರೆ ಸರಿ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿಯು ನೋಡಿ ಇದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ, ಮುಂದುವರೆದು ಸಾಕ್ಷಿಯು ದಾಖಲೆಯನ್ನು ಕುಲಂಕುಷವಾಗಿ ನೋಡಿದ್ದು, ಇದು ಅಹ್ಮದಬಿರವರ ಹೆಸರಿನಲ್ಲಿ ಇದೆ ಎಂದು ಹೇಳಿರುತ್ತಾರೆ. ಅದರಲ್ಲಿ ಅಹ್ಮದಬಿರವರ ತಾಯಿಯ ಹೆಸರು, ಗಂಡನ ಹೆಸರು ಮತ್ತು ಮರಣವಾದ ದಿನಾಂಕ ಇದೆ ಎಂದು ನೋಡಿ ಸಾಕ್ಷಿ ನುಡಿದಿರುತ್ತಾರೆ, ಆದರೆ ಇದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ಸಾಕ್ಷಿಯು ನುಡಿದಿರುತ್ತಾರೆ. ಸದರಿ ದಾಖಲೆಯನ್ನು ಪ್ರತಿವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಅದನ್ನು ನಿಪಿ.112 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿಯು ನೋಡಿ ಕುಲಂಕುಷವಾಗಿ ಪರಿಶೀಲಿಸಿದ್ದು, ಸದರಿ ದಾಖಲೆಯು ಅಬ್ದುಲ ಹಕೀಮಖಾನ್ ಬಿರಾದರ ನವಾಬ ತಂದೆ ಸರ್ದಾರ್ ಅಬ್ದುಲ ಮಜೀದಖಾನಸಾರವರ ವ್ಯಾಸಂಗ ಮತ್ತು ಜಾತಿ ಪ್ರಮಾಣ ಪತ್ರ ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ದಾಖಲೆಯನ್ನು ಪ್ರತಿವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಅದನ್ನು ನಿಪಿ.113 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿಯು ನೋಡಿ ಕುಲಂಕುಷವಾಗಿ ಪರಿಶೀಲಿಸಿದ್ದು, ಸದರಿ ದಾಖಲೆಯು ಅಬ್ದುಲ ವಹೀದಖಾನ್ ಬಿರಾದರ ತಂದೆ ಅಬ್ದುಲ ಹಕೀಮಖಾನ್ ಬಿರಾದರರವರ ವ್ಯಾಸಂಗ ಮತ್ತು ಜಾತಿ ಪ್ರಮಾಣ ಪತ್ರ ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ದಾಖಲೆಯನ್ನು ಪ್ರತಿವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಅದನ್ನು ನಿಪಿ.114 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿಯು ನೋಡಿ ಕುಲಂಕುಷವಾಗಿ ಪರಿಶೀಲಿಸಿದ್ದು, ಸದರಿ ದಾಖಲೆಯು ಅಬ್ದುಲ ರವುಫಖಾ ತಂದೆ ತಬ್ರೇಜಖಾನ್ ಬಿರಾದರ ನವಾಬರವರ ಶಾಲಾ ಪ್ರಮಾಣ ಪತ್ರ ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ದಾಖಲೆಯನ್ನು ಪ್ರತಿವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಅದನ್ನು ನಿಪಿ.115 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿಯು ನೋಡಿ ಕುಲಂಕುಷವಾಗಿ ಪರಿಶೀಲಿಸಿದ್ದು, ಸದರಿ ದಾಖಲೆಯು ರಹಮತಬಿಬಿರವರ ಮರಣ ಪ್ರಮಾಣ ಪತ್ರವಿದ್ದು, ಅದರಲ್ಲಿ ತಬ್ರೇಜಖಾನ್ ಸಾಹೇಬ್ ಬಿರಾದರರವರ ಹೆಸರು ಇದ್ದು, ಅವರು

ರಹಮತಬಿಬಿರವರ ತಂದೆಯೋ ಅಥವಾ ಗಂಡನೋ ಅದರಲ್ಲಿ ನಮೂದಿಸಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ದಾಖಲೆಯನ್ನು ಪ್ರತಿವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಅದನ್ನು ನಿಪಿ.116 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿಯು ನೋಡಿ ಕುಲಂಕುಷವಾಗಿ ಪರಿಶೀಲಿಸಿದ್ದು, ಸದರಿ ದಾಖಲೆಯು ತಬ್ರೇಜಖಾನಸಾಬ್ ರವರ ಮರಣ ಪ್ರಮಾಣ ಪತ್ರವಿದ್ದು, ಅದರಲ್ಲಿ ಅವರ ತಂದೆಯ ಹೆಸರು ಫರಜಂತ ಫಯಾಜಖಾನಸಾಬ್ ಬಿರಾದರ ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ದಾಖಲೆಯನ್ನು ಪ್ರತಿವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಅದನ್ನು ನಿಪಿ.117 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿಯು ನೋಡಿ ಕುಲಂಕುಷವಾಗಿ ಪರಿಶೀಲಿಸಿದ್ದು, ಸದರಿ ದಾಖಲೆಯು ಅಬ್ದುಲ ಮಜೀದಖಾರವರ ಮರಣ ಪ್ರಮಾಣ ಪತ್ರವಿದ್ದು, ಅದರಲ್ಲಿ ಅವರ ತಂದೆಯ ಹೆಸರು ಫಯಾಜಖಾ ಬಿರಾದರ ನವಾಬ ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ದಾಖಲೆಯನ್ನು ಪ್ರತಿವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಅದನ್ನು ನಿಪಿ.118 ಎಂದು ಗುರುತಿಸಲಾಯಿತು.

ಅಬ್ದುಲ ಮಜೀದಖಾನ್‌ರವರ ತಂದೆಯ ಹೆಸರು ಫಯಾಜಖಾನ್ ಬಿರಾದರ ನವಾಬ ಇರುತ್ತದೆ ಎಂದರೆ ಸರಿ. ಫಯಾಜಖಾನ್ ಬಿರಾದರ ನವಾಬರವರು ಹುಸೇನಖಾತುರವರ ಗಂಡ ಎಂದರೆ ನನಗೆ ಗೊತ್ತಿಲ್ಲ. ಮಜೀದಖಾನ್ ಉರ್ಫ ಅಬ್ದುಲ ಮಜೀದಖಾನ್ ಬಿರಾದರ ನವಾಬರವರ ಹೆಂಡತಿಯ ಹೆಸರು ಮಹಮೂದಾ ಬೇಗಂ ಎಂದರೆ ಸರಿ. ತಬ್ರೇಜಖಾನ್ ಬಿರಾದರ ನವಾಬರವರ ಹೆಂಡತಿ ರಹಮತಬಿ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಅಜ್ಜಿಯ ಸಹೋದರಿಯರು ಎಷ್ಟು ಮಂದಿ ಎಂದರೆ ನನಗೆ ಗೊತ್ತಿಲ್ಲ. ವಾದಿಯರು ಸಲ್ಲಿಸಿದ ವಂಶವೃಕ್ಷದಲ್ಲಿ ಮಹಮೂದ ಬೇಗಂ ರವರಿಗೆ ಒಬ್ಬ ಸಹೋದರಿ ಇದ್ದಾರೆ ಎಂದು ತೋರಿಸಿದ್ದಾರೆ, ಅದರ ಬಗ್ಗೆ ನೀವೇನಾದರು ದಾಖಲೆಗಳನ್ನು ಪರಿಶೀಲಿಸಿ ಸದರಿ ದಾವೆಯಲ್ಲಿ ಕೈಫಿಯತನ್ನು ಹಾಕಿದ್ದೀರಾ ಎಂದರೆ ಸಾಕ್ಷಿಯು ನಾವು ಪರಿಶೀಲಿಸಿದ್ದೆವು ಆದರೆ ಅವರಿಗೆ ಯಾವುದೇ ಸಹೋದರಿಯರು ಇಲ್ಲ ಎಂದು ತಿಳಿದು ಬಂದಿದ್ದು, ನಂತರ ಕೈಫಿಯತನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇವೆ. ಮಹಮೂದಾ ಬೇಗಂ ರವರಿಗೆ ಸಹೋದರಿಯರು ಇಲ್ಲ ಎಂದು ನಿಮ್ಮ ಕೈಫಿಯತನಲ್ಲಿ ನಮೂದು ಮಾಡಿದ್ದೀರೋ ಇಲ್ಲವೋ ಎಂದರೆ ನಮೂದು

ಮಾಡಿರುವುದಿಲ್ಲ.

ಮಹಮೂದಾ ಬೇಗಂ ಮತ್ತು ರಹಮತಬಿರವರು ಹುಸೇನಖಾತುರವರ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಅಜ್ಜಿಯವರ ತವರು ಮನೆ ಯಾವುದು ಎಂದರೆ ನನಗೆ ನೆನಪಿರುವುದಿಲ್ಲ.

ನೀವು ಸಲ್ಲಿಸಿದ ವಂಶವೃಕ್ಷದಲ್ಲಿ ಮಹಮ್ಮದ ಅಕ್ಬರಖಾನ್ ಬಿರಾದರ ನವಾಬರವರ ತಂದೆಯ ಹೆಸರು ಮತ್ತು ಅಜ್ಜನ ಹೆಸರು ನಮೂದಿಸಿರುವುದಿಲ್ಲ ಎಂದರೆ ಸರಿ. ನೀವು ವಾದಿಯವರ ಬಿರದಾರ ಸಂಬಂಧದವರು ಎಂದರೆ ಸರಿ. ಮುಂದುವರೆದು ನಮಗು ಅವರಿಗು ದೂರದ ಸಂಬಂಧ ಇರುತ್ತದೆ. ನೀವು ಮತ್ತು ವಾದಿಯರು ಒಂದೇ ವಂಶವೃಕ್ಷದ ಅಡಿಯಲ್ಲಿ ಬರುತ್ತೀರಿ ಎಂದರೆ ನನಗೆ ಗೊತ್ತಿಲ್ಲ. ವಾದಿಯರ ಮತ್ತು ನಿಮ್ಮ ಮೂಲ ಪುರುಷ ಅಬ್ದುಲ ಖೈರಖಾನ್ ನವಾಬ ಮತ್ತು ಅವರ ಹೆಂಡತಿ ರಾಜಬಿ ಇರುತ್ತಾರೆ ಎಂದರೆ ಸುಳ್ಳು. ಸದರಿ ಅಬ್ದುಲ ಖೈರಖಾನ್ ನವಾಬ ಮತ್ತು ರಾಜಬಿರವರಿಗೆ ದುಲಾಖಾನ್ ಬಿರಾದರ ನವಾಬ, ಮುಬಾರಿಸಖಾನ್ ಬಿರಾದರ ನವಾಬ ಎಂಬ ಇಬ್ಬರು ಮಕ್ಕಳು ಇದ್ದರು ಎಂದರೆ ಸುಳ್ಳು. ಮಹಮ್ಮದ ಅಕ್ಬರಖಾನ್ ಬಿರಾದರ ನವಾಬರವರ ಮಗ ಸರ್ದಾರ್ ಮಹಬೂಬಅಲಿಖಾನ್ ಎಂದರೆ ಸರಿ. ಮಹಮ್ಮದ ಅಕ್ಬರಖಾನ್ ಬಿರಾದರ ನವಾಬರವರ ತಾಯಿಯ ಹೆಸರು ಸಾಹೇಬಖಾತು ಎಂದರೆ ನನಗೆ ಗೊತ್ತಿಲ್ಲ. ಸಾಹೇಬಖಾತುರವರು ಮುಬಾರಿಸಖಾನ್ ಬಿರಾದರ ನವಾಬರವರ ಹೆಂಡತಿ ಎಂದರೆ ಸುಳ್ಳು.

ಈ ದಾವೆಯಲ್ಲಿ ನಿಮ್ಮ ಹೆಂಡತಿಯಾದ ಶಹಜಾದಬೇಗಂ ಉರ್ಫ ರಹೆಮಾನಖಾತು ರವರನ್ನು ಸಾಕ್ಷಿದಾರರನ್ನಾಗಿ ಮಾಡುತ್ತೀರಾ ಎಂದರೆ ಪ್ರತಿವಾದಿ ಪರ ವಕೀಲರು ಸದರಿ ಪ್ರಶ್ನೆಗೆ ತಕರಾರನ್ನು ಎತ್ತಿರುತ್ತಾರೆ. ಮುಂದುವರೆದು ಸಾಕ್ಷಿಯು ನನ್ನ ಹೆಂಡತಿಗೆ ವಯಸ್ಸಾಗಿದ್ದು, ಅವಳಿಗೆ ಅನಾರೋಗ್ಯವಿರುವುದರಿಂದ ಮಾಡಿಸುವುದಿಲ್ಲ ಎಂದು ಸಾಕ್ಷಿಯು ನುಡಿದಿರುತ್ತಾರೆ. ನಿಮ್ಮ ಹೆಂಡತಿಯನ್ನು ಸಾಕ್ಷಿದಾರರನ್ನಾಗಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಸಿದರೆ ನಿಜವಾದ ಸಂಗತಿಗಳು ಹೊರಗೆ ಬರುತ್ತದೆ ಆದ ಕಾರಣ ನೀವು ಅವರನ್ನು ಸಾಕ್ಷಿದಾರರನ್ನಾಗಿ ಮಾಡುವುದಿಲ್ಲ ಎಂದರೆ ಸುಳ್ಳು. ನಿಮ್ಮ ಹೆಂಡತಿಯಿಂದ ಯಾವಾಗ ಮೊಕ್ತಿಯಾರನಾಮಾ ಪತ್ರವನ್ನು ನೀವು ಪಡೆದುಕೊಂಡಿರುತ್ತೀರಿ ಎಂದರೆ ಸರಿಯಾದ ದಿನಾಂಕ ನೆನಪಿರುವುದಿಲ್ಲ. ಮುಂದುವರೆದು ಅಜಮಾಸು 1980 ರಲ್ಲಿ ಪಡೆದಿರುತ್ತೇನೆ. ನಿಮ್ಮ ಹೆಂಡತಿಯು ನಿಮಗೆ

ಮೊಕ್ತಿಯಾರನಾಮಾ ಪತ್ರವನ್ನು ಬರೆದುಕೊಟ್ಟಾಗ ಅವರಿಗೆ ಎಷ್ಟು ವಯಸ್ಸಾಗಿತ್ತು ಎಂದರೆ ಸರಿಯಾಗಿ ನನಗೆ ನೆನಪಿರುವುದಿಲ್ಲ, ಮುಂದುವರೆದು ಅಂದಾಜು 28 ರಿಂದ 30 ವರ್ಷ ಇರಬಹುದು ಎಂದು ಸಾಕ್ಷಿ ನುಡಿದಿರುತ್ತಾರೆ.

ನಿಮ್ಮ ಹೆಂಡತಿಯು ನಿಮಗೆ ಮೊಕ್ತಿಯಾರನಾಮಾ ಪತ್ರವನ್ನು ಬರೆದುಕೊಟ್ಟಾಗ ಅವರು ದೈಹಿಕವಾಗಿ ಆರೋಗ್ಯವಾಗಿದ್ದರು ಎಂದರೆ ಸರಿ. ಮುಂದುವರೆದು ಅವರಿಗೆ ನ್ಯಾಯಾಲಯಕ್ಕೆ ಹೋಗಿ-ಬರಲು ತೊಂದರೆಯಾಗುತ್ತದೆ ಎಂದು ಮೊಕ್ತಿಯಾರನಾಮಾ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ವಾದಿಯರು ಸಲ್ಲಿಸಿದ ವಂಶಾವಳಿಯಲ್ಲಿ ಸರ್ದಾರ್ ಮಹೆಬೂಬಅಲಿಖಾನ್ ರವರ ವಾರಸುದಾರರು, ನೀವು ಮತ್ತು ವಾದಿಯರು ಆಗುತ್ತೀರಿ ಎಂದರೆ ಸುಳ್ಳು.

ಅಸಲು ದಾವೆ ಸಂಖ್ಯೆ 171/1984 ಅನ್ನು ದಾಖಲಿಸುವ ಮೊದಲು Court of Wards ರವರಿಗೆ ನೋಟೀಸನ್ನು ಯಾವ ತಾರೀಖಿಗೆ ನೀಡಿರುತ್ತೀರಾ ಎಂದರೆ ನನಗೆ ಸರಿಯಾದ ದಿನಾಂಕ ನೆನಪಿರುವುದಿಲ್ಲ ಆದರೆ 1980 ರಲ್ಲಿ ನೋಟೀಸನ್ನು ನೀಡಿರುತ್ತೇವೆ. ಶ್ರೀ.ಸಿ.ಎಂ ಕುಲಕರ್ಣಿ ವಕೀಲರು ಹಾವೇರಿರವರ ಮುಖಾಂತರ court of wards ರವರಿಗೆ ನೋಟೀಸನ್ನು ನೀಡಿರುತ್ತೀರಿ ಎಂದರೆ ಸರಿ. ಸದರಿ ನೋಟೀಸನ್ನು ದಿಃ18-12-1980 ನೇ ದಿನಾಂಕದಂದು ನೀಡಿರುತ್ತೀರಿ ಎಂದರೆ ಸರಿ. ಅಸಲು ದಾವೆ ಸಂಖ್ಯೆ 171/1984 ಅನ್ನು ದಿನಾಂಕ 12-06-1984 ರಂದು ನ್ಯಾಯಾಲಯಕ್ಕೆ ದಾಖಲು ಮಾಡಿರುತ್ತೀರಿ ಎಂದರೆ ಸಾಕ್ಷಿಯು ದಾಖಲೆಯನ್ನು ಪರಿಶೀಲಿಸಿ ಸರಿ ಎಂದು ನುಡಿದಿರುತ್ತಾರೆ. ಸದರಿ ದಾವೆಯು ವಜಾ ಆಗಿರುತ್ತದೆಯೋ ಅಥವಾ ಹಿಂಪಡೆದಿರುತ್ತೀರೋ ಎಂದರೆ ಹಾವೇರಿ ನ್ಯಾಯಾಲಯವು ಸವಣೂರು ನ್ಯಾಯಾಲಯಕ್ಕೆ ವರ್ಗಾವಣೆ ಮಾಡಿರುತ್ತದೆ. ನಾನು ಹೇಳಿದ ವರ್ಗಾವಣೆ ಆದೇಶವನ್ನು ಈ ದಾವೆಯನ್ನು ನಾನು ಸಲ್ಲಿಸಿರುವುದಿಲ್ಲ. ಅಸಲು ದಾವೆ ಸಂಖ್ಯೆ 171/1984 ರಲ್ಲಿ ಯಾರ್ಯಾರು ಪಕ್ಷಗಾರರು ಇದ್ದರು ಎಂದರೆ ಡಿ.ಸಿ ಧಾರವಾಡ, courts of wards, ಇನ್ನಜಗಿರಿ ಮತ್ತು ಪಿ.ಟಿ ಹಬೀಬರವರು ಪಕ್ಷಗಾರರಾಗಿದ್ದರು. ಇನ್ನಜಗಿರಿರವರನ್ನು ಯಾವ ಉದ್ದೇಶಕ್ಕಾಗಿ ಪಕ್ಷಗಾರರನ್ನಾಗಿ ಮಾಡಿರುತ್ತೀರಿ ಎಂದರೆ ಇನ್ನಜಗಿರಿರವರೆ ಸದರಿ ದಾವೆಯಲ್ಲಿ ಪಕ್ಷಗಾರರಾಗಿ ಬಂದಿರುತ್ತಾರೆ. ಇನ್ನಜಗಿರಿರವರು ವ್ಯಕ್ತಿಕನಾತೆಯಲ್ಲಿ ಪಕ್ಷಗಾರರಾಗಿರಲಿಲ್ಲ ಎಂದರೆ ಕುಂಬರವಾಡ ಮಜೀದ್ ಮುತವಲ್ಲಿರ ನಾತೆಯಿಂದ ಪಕ್ಷಗಾರರಾಗಿ ಬಂದಿರುತ್ತಾರೆ. ಇನ್ನಜಗಿರಿರವರು ಯಾವ ಉದ್ದೇಶಕ್ಕಾಗಿ ಪಕ್ಷಗಾರರಾಗಿ ಬಂದಿದ್ದರು ಎಂದರೆ

ನವಾಜಖಾತುರವರು ಒಂದು ಆಸ್ತಿಯನ್ನು ಅವರಿಗೆ ಪತ್ರದ ಮುಖಾಂತರ ಕೊಟ್ಟಿದ್ದರು ಎಂಬ ಉದ್ದೇಶದಿಂದ ಇನ್ನಡಜಗಿರಿರವರು ಪಕ್ಷಗಾರರಾಗಿ ಬಂದಿರುತ್ತಾರೆ. ಕುಂಬಾರವಾಡ ಮಜೀದ ಮುತವಲ್ಲಿರವರು P & Sc 8/1979, IInd Addl. District & Sessions Court, at Dharwad ರವರಿಂದ ಆದೇಶದ ಪಡೆದಿರುತ್ತಾರೆ, ಸದರಿ ಆದೇಶವನ್ನು ಪ್ರಶ್ನಿಸಿ ನೀವು ಮಿಸ್ಲೇನಿಯಸ್ ಸಂಖ್ಯೆ 369/1981 ಅನ್ನು ದಾಖಲಿಸಿದ್ದೀರಿ ಎಂದರೆ ನನಗೆ ನೆನಪಿರುವುದಿಲ್ಲ. ಮುಂದುವರೆದು ದಾಖಲೆಯನ್ನು ತೋರಿಸಿದರೆ ನೋಡಿ ಹೇಳುತ್ತೇನೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.